## <u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

## <u>ಸಿ.ಸಿ.467/2016</u>

<u>ಸಾಕ್ಷಿದಾರರ ಹೇಳಿಕೆಃ</u>

| | | | |
|---|---|---|---|
| **ಹೆಸರು** | ಹರೀಶ .ಬಿ | ಚಾಸಾಃ **5** | ಪ್ರಾಸಾಃ **5** |
| **ತಂದೆಯ ಹೆಸರು** | ಹನುಮಂತಪ್ಪ | | |
| **ವಯಸ್ಸು** | **38** | | |
| **ವೃತ್ತಿ** | ಸಾಫ್ಟ್‌ವೇರ್ ಇಂಜಿನಿಯರ್ | | |
| **ವಾಸಸ್ಥಳ** | ಫಲವನಹಳ್ಳಿ | | |

ದಿನಾಂಕಃ **21-10-2023** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯವಿಚಾರಣೆ :- ಮಾನ್ಯ ಸ.ಸ.ಅ. ರವರಿಂದ:-</u>

ಚಾಸಾ 1 ನನ್ನ ಅಣ್ಣ. ಚಾಸಾ 4 ನನ್ನ ತಾಯಿ. 1 ನೇ ಆರೋಪಿ ನಮ್ಮ ತಾತನ ಮೊದಲನೇ ಹೆಂಡತಿಯ ಮಗ. 2 ರಿಂದ 4 ನೇ ಆರೋಪಿತರು 1 ನೇ ಆರೋಪಿಯ ಮಕ್ಕಳು . ಚಾಸಾ 1, 4 ಮತ್ತು ನಾನು ಹಾಗೂ ನನ್ನ ಚಿಕ್ಕಪ್ಪಂದಿರಾದ ಸಣ್ಣತಿಮ್ಮಪ್ಪ ಮತ್ತು ಗೋವಿಂದಪ್ಪ ರವರು ಮತ್ತು ಅವರ ಹೆಂತಿ ಮಕ್ಕಳು ಒಟ್ಟು ಕುಟುಂಬದಲ್ಲಿ ವಾಸವಾಗಿರುತ್ತೇವೆ. 3 ವರ್ಷಗಳ ಹಿಂದೆ ನನ್ನ ತಂದೆ ತೀರಿಕೊಂಡಿರುತ್ತಾರೆ. ನಮ್ಮ ತಾತನಿಗೆ ಸೇರಿದ ಆಸ್ತಿಗಳನ್ನು ನಮ್ಮ ತಾತನ ಮೊದಲನೇ ಹೆಂಡತಿಯ ಮಕ್ಕಳು ಮತ್ತು ಎರಡನೇ ಹೆಂಡತಿಯ ಮಕ್ಕಳು ಸುಮಾರು 25 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿದ್ದರು ಸಹ ಆರೋಪಿತರು ಮತ್ತು ನಮ್ಮ ತಂದೆ ಹನುಮಂತಪ್ಪನವರ ಪಾಲಿಗೆ ಬಂದಿದ್ದ ನಮ್ಮ ಮನೆಯ ಹಿತ್ತಲಿನಲ್ಲಿರುವ ಕಣದ ಜಾಗಕ್ಕೆ ಪದೇ ಪದೇ ಬಂದು ಈ ಜಾಗ ನಮಗೆ ಬರಬೇಕು ಎಂದು ಪದೇ ಪದೇ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು . ನಾನು ಸುಮಾರು 12 ವರ್ಷಗಳಿಂದ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದು, ಅವಾಗವಾಗ ಊರಿಗೆ ಬರುತ್ತಿದ್ದೆನು. ನಾನು 2016 ಜನವರಿ 26 ರಂದು ಊರಿಗೆ ಬಂದಿದ್ದೆ. ಮರುದಿನ ಮನೆಯಲ್ಲಿ ನಮ್ಮ ಅಮ್ಮನ ಜೊತೆ ಹಿತ್ತಲಿನಲ್ಲಿ

ಮಾತನಾಡುತ್ತಿದ್ದಾಗ ಅಣ್ಣ ಹಾಲ್ ನಲ್ಲಿದ್ದರು. ಆಗ ಆರೋಪಿಗಳು ನಮ್ಮ ಮನೆಯ ಎದುರುಗಡೆ ಬಂದು ನಮ್ಮನ್ನು ಸೂಳೇಮಕ್ಕಳಾ, ಬೋಳೀಮಕ್ಕಳಾ ಎಂದು ನಮ್ಮನ್ನು ಕುರಿತು ಬೈಯ್ಯುತ್ತಿದ್ದರು. ನಮ್ಮ ಅಣ್ಣ ಚಾಸಾ 1 ರವರು ಹೋಗಿ ಸದರಿ ಆರೋಪಿಗಳನ್ನು ಯಾಕೆ ಈ ತರ ಬೈತಿರಾ ಎಂದು ಕೇಳಿದಾಗ ಆರೋಪಿಗಳು ಚಾಸಾ 1 ರವರನ್ನು ಹೊಡೆದಿರುತ್ತಾರೆ. 1 ನೇ ಆರೋಪಿಯು ಕೈಯಿಂದ ಚಾಸಾ 1 ರವರ ತಲೆಗೆ ಹೊಡೆದಿದ್ದು, 2 ನೇ ಆರೋಪಿಯು ಚಾಸಾ 1 ರವರ ಮರ್ಮಾಂಗಕ್ಕೆ ಕಬ್ಬಿಣದ ತುಂಡಿನಿಂದ ಹೊಡೆದಿದ್ದು, ಚಾಸಾ 1 ರವರ ಮರ್ಮಾಂಗದಿಂದ ರಕ್ತ ಬರುತ್ತಿತ್ತು. ಆಗ ಚಾಸಾ 1 ರವರು ಚೀರಿಕೊಂಡಿದ್ದು, ನಾನು ಮತ್ತು ಚಾಸಾ 3 ರವರು ಬಂದು ನೋಡಲಾಗಿ ಚಾಸಾ 1 ರವರು ಚೀರಿಕೊಂಡು ಮರ್ಮಾಂಗದಿಂದ ರಕ್ತ ಬರುತ್ತಿತ್ತು, ಸದರಿ ಆರೋಪಿಗಳನ್ನು ಯಾಕೆ ಈ ತರಹ ಮಾಡುತ್ತೀರಾ ಎಂದು ನಾನು ಕೇಳಿದಾಗ 3 ನೇ ಆರೋಪಿಯು ನನ್ನ ಎಡಗೈ ರಟ್ಟೆಗೆ ತನ್ನ ಉಗುರಿನಿಂದ ಜೋರಾಗಿ ಪರಚಿದರು ಮತ್ತು ನನ್ನ ಕಾಲಿಗೆ, ಮೈಗೆ, ಕೈಗೆಲ್ಲಾ ತನ್ನ ಕೈಗಳಿಂದ ಹೊಡೆದನು. ಆಗ ಚಾಸಾ 4 ರವರು ಬಂದು ಕೇಳಿದಾಗ ಚಾಸಾ 4 ರವರನ್ನು 4 ನೇ ಆರೋಪಿ ಕೈಗಳಿಂದ ಹೊಡೆದು ನೂಕಿರುತ್ತಾನೆ. 2 ನೇ ಆರೋಪಿ ದೊಣ್ಣೆಯಿಂದ ಚಾಸಾ 1 ರವರ ಕಾಲಿಗೆ ಹೊಡೆದು ಗಾಯಪಡಿಸಿರುತ್ತಾರೆ. ಚಾಸಾ 6 ರಿಂದ 9 ರವರು ಬಂದು ಜಗಳ ಬಿಡಿಸಿರುತ್ತಾರೆ. ಚಾಸಾ 10 ಮತ್ತು 11 ರವರು ಗಜೇಂದ್ರ ಎಂಬುವವರ ಜೊತೆ ನನ್ನನ್ನು ಮತ್ತು ಚಾಸಾ 1 ಮತ್ತು 4 ರವರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಪೊಲೀಸರು ಈ ಘಟನೆಯ ಬಗ್ಗೆ ನನ್ನಿಂದ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಗಳೇ ನಮ್ಮ ಮೇಲೆ ಹಲ್ಲೆ ಮಾಡಿರುವ ವ್ಯಕ್ತಿಗಳು ಎಂದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಒಂದು ಕಬ್ಬಿಣದ ತುಂಡನ್ನು ಮತ್ತು ಒಂದು ದೊಣ್ಣೆಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ನನಗೆ ಸರಿಯಾಗಿ ಗುರುತು ಹಿಡಿಯಲು ಆಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಒಂದು ಕಬ್ಬಿಣದ ತುಂಡನ್ನು ಮತ್ತು ಒಂದು ದೊಣ್ಣೆಯನ್ನು ಈಗಾಗಲೇ ಮು.ಮಾ 1 ಮತ್ತು ಮು.ಮಾ 2 ಎಂದು ಗುರುತಿಸಲಾಗಿರುತ್ತದೆ.

ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

ಪಾಟೀ ಸವಾಲು:- ಮಾನ್ಯ ಸ.ಸ.ಅ. ರವರಿಂದ:-

ಚಾಸಾ 6 ರವರು ಪೊಲೀಸ್ ನವರಿಗೆ ಮಹಜರ್ ಸಮಯದಲ್ಲಿ ಮು.ಮಾ.1 ಮತ್ತು 2 ನ್ನು ಹಾಜರುಪಡಿಸಿ ಸದರಿ ಮು.ಮಾ 1 ಮತ್ತು 2 ರಿಂದಲೇ ಆರೋಪಿಗಳು ಚಾಸಾ 1 ರವರ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ಕೊಟ್ಟಿದ್ದು, ಸದರಿ ಮು.ಮಾ 1 ಕಬ್ಬಿಣದ ಕುಡುಗೋಲಿನ ತುದಿಯ ತುಂಡು ಎಂದು ಸದರಿ ಮು.ಮಾ 1 ಇದೆ ಆಗಿರುತ್ತದೆ ಮತ್ತು ಒಂದು ದೊಣ್ಣೆಯನ್ನು ಸದರಿ ಮು.ಮಾ 2 ಇದೆ ಆಗಿರುತ್ತದೆ ಎಂದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಆಗಿರಬಹುದು ಎಂದು ನುಡಿಯುತ್ತಾರೆ.

ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್.ಎಂ (ಶ್ರೀ ಎಸ್.ಎನ್.ಪಿ ವಕೀಲರ ಪರ ) ವಕೀಲರಿಂದ ಃ-

ನನ್ನ ಅಜ್ಜ ತಿಮ್ಮಪ್ಪನ ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಜಗಳ ನಡೆದಿರುತ್ತದೆ ಎಂದರೆ ಸರಿಯಲ್ಲ. ಘಟನೆ ನಡೆದ ಹಿತ್ತಲಿನ ಕಣದ ವಿಚಾರಕ್ಕೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಇರುತ್ತದೆ ಎಂದರೆ ಈ ಗಲಾಟೆ ನಡೆದ ಮೇಲೆ ದಾವೆ ಹಾಕಿರುತ್ತಾರೆ . ನಾನು ಹೇಳಿದ ಹಾಗೇ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು, ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.